2. ವಿವಾದ ರಹಿತ ತತ್ಕಾಲ್ ಪೋಡಿ ಪ್ರಕರಣಗಳಲ್ಲಿ ದುರಸ್ತಿ ಸಹಿತ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ – 30 ದಿನಗಳು.

ಸಿಬ್ಬಂದಿಯ ಲಭ್ಯತೆಯ ಮೇರೆಗೆ ಸರ್ವೆ ಕೆಲಸವನ್ನು ಸಾಧ್ಯವಾದಷ್ಟು ನಿಗಧಿತ ಸಮಯದಲ್ಲಿ ಪೂರೈಸುವಲ್ಲಿ ಮುತುವರ್ಜಿ ವಹಿಸಲಾಗುತ್ತಿದೆ.

ಈ. ಕರ್ನಾಟಕ ಭೂಕಂದಾಯ ಅಧಿನಿಯಮ 1964 ಹಾಗೂ ಭೂಕಂದಾಯ ನಿಯಮಾವಳಿ 1966ರಲ್ಲಿ ಅವಕಾಶ ಕಲ್ಪಿಸಿರುವಂತೆ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಭೂ ಒತ್ತುವರಿ

698(574) ಶ್ರೀ ಕರಡಿ ಸಂಗಣ್ಣ ಅಮರಪ್ಪ:(ಕೊಪ್ಪಳ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನಲ್ಲಿರುವ ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಾರ್ಖಾನೆಯ ಭೂ ಒತ್ತುವರಿ ಮಾಡಿಕೊಂಡಿರುವ ವಿಸ್ತೀರ್ಣವೆಷ್ಟು ಮಾಹಿತಿ ನೀಡುವುದು.

ಆ) ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಾರ್ಖಾನೆಯು ಸರ್ಕಾರಿ ವಿಮಾನ ನಿಲ್ದಾಣದ ಜಾಗವನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಇ) ಬಂದಿದ್ದಲ್ಲಿ ಒತ್ತುವರಿ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು?

ಈ) ಸದರಿ ಸಿಮೆಂಟ್ ಕಾರ್ಖಾನೆಯಿಂದ ಉತ್ಪಾದನೆಯಾಗುವ ಸಿಮೆಂಟ್ ಅನ್ನು ರಫ್ತು ಮಾಡುವ ಉದ್ದೇಶಕ್ಕಾಗಿ ರೈಲು ಮಾರ್ಗವನ್ನು ಜೋಡಿಸಿರುವುದರಿಂದ ವಿಮಾನ ನಿಲ್ದಾಣಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಬಂದಿದ್ದಲ್ಲಿ ಸರ್ಕಾರವು ಕಾರ್ಖಾನೆಯ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಂಡಿರುವುದೇ; (ಮಾಹಿತಿ ನೀಡುವುದು)

ಊ) ಈ ಕಾರ್ಖಾನೆಯಿಂದ ಮೇಲೇಳುವ ಸಿಮೆಂಟ್ ಧೂಳಿನಿಂದ ಪರಿಸರ ಮಾಲಿನ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಋ) ಬಂದಿದ್ದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಮುರುಗೇಶ್ ಆರ್ ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕೊಪ್ಪಳ ತಾಲ್ಲೂಕಿನಲ್ಲಿರುವ ಮೆ : ಅಲ್ಟ್ರಾಟೆಕ್ ಸಿಮೆಂಟ್ ಕಾರ್ಖಾನೆಯು 10 ಎಕರೆ 33 ಗುಂಟೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿದೆ.

(ಕಂದಾಯ ಇಲಾಖೆಯ ವರದಿಯಂತೆ)

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಇಲ್ಲ

ಉ) ಅನ್ವಯಿಸುವುದಿಲ್ಲ

ಊ) ಇಲ್ಲ

ಋ) ಅನ್ವಯಿಸುವುದಿಲ್ಲ

ಕಿಂಡಿ ಅಣೆಕಟ್ಟು

699(1315) ಶ್ರೀ ಖಾದರ್ ಯು ಟಿ:(ಮಂಗಳೂರು) ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಪ್ರಸ್ತುತ ವರ್ಷದಲ್ಲಿ ಸರ್ಕಾರ ಎಷ್ಟು "ಕಿಂಡಿ ಅಣೆಕಟ್ಟು"ಗಳನ್ನು (ಚೆಕ್‌ಡ್ಯಾಂ) ನಿರ್ಮಿಸಲಾಗುವುದು (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ ಇದಕ್ಕಾಗಿ ಎಷ್ಟು ಹಣವನ್ನು ಮೀಸಲಾಗಿರಿಸಿದೆ.

ಇ ಸಮುದ್ರದ ಹಿನ್ನೀರಿನಿಂದಾಗಿ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಗೋವಿಂದ ಎಂ ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)